# ಅನಿಕೇತನ

ಡಾ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

# ANIKETANA

Dr. Manmohan Singh
Bengaluru City University

ಸಂಪುಟ 01 | ಸಂಚಿಕೆ 09 | ಬೆಂಗಳೂರು | July 2026 | ಪುಟ 01


# BCಯೋತ್ಸವ 3.0 ಸಾಂಸ್ಕೃತಿಕ ಕಲಾವೈಭವ











ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶನಾಲಯದ ವತಿಯಿಂದ ಜ್ಞಾನಜ್ಯೋತಿ ಕ್ಯಾಂಪಸ್ ನಲ್ಲಿ ಪ್ರತಿ ವರ್ಷದಂತೆ ವಿದ್ಯಾರ್ಥಿಗಳ ಪ್ರತಿಭೆಯನ್ನು ಉತ್ತೇಜಿಸಿ ಪೋಷಿಸುವ ಉದ್ದೇಶದಿಂದ ಭಾರತೀಯ ವಿಶ್ವವಿದ್ಯಾಲಯಗಳ ಸಂಘದ (ಎಐಯು) ಮಾರ್ಗಸೂಚಿಗಳಿಗೆ ಅನುಗುಣವಾಗಿ "ಬಿಸಿಯು ಉತ್ಸವ–3.0" ಆಯೋಜಿಸಲಾಗಿತ್ತು.

ಉತ್ಸವದ ಪ್ರಯುಕ್ತ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಜೂನ್ 29 ಮತ್ತು 30ರಂದು ಸಂಗೀತ, ಸಮೂಹ ನೃತ್ಯ, ಗಾಯನ, ಭರತನಾಟ್ಯ, ರಸಪ್ರಶ್ನೆ, ಏಕಪಾತ್ರಾಭಿನಯ, ಕಿರುನಾಟಕ, ಮಿಮಿಕ್ರಿ, ಭಾಷಣ ಸ್ಪರ್ಧೆ, ಚರ್ಚಾಸ್ಪರ್ಧೆ, ರಂಗೋಲಿ, ಜಾನಪದ ಕಲೆ, ಚಿತ್ರ ರಚನೆ, ಪೋಸ್ಟರ್ ಪ್ರದರ್ಶನ, ಕಾರ್ಟೂನಿಂಗ್, ಫ್ಯಾಷನ್ ಷೋ ಮುಂತಾದ ಅನೇಕ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಜೂನ್ 23 ಮತ್ತು 24 ರಂದು ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಮೈದಾನದಲ್ಲಿ ಎರಡು ದಿನಗಳ ಅಂತರ ವಿಭಾಗ ಕ್ರೀಡಾಕೂಟವನ್ನು ಸಂಘಟಿಸಲಾಗಿತ್ತು. ವಿವಿಧ ಸ್ಪರ್ಧೆಗಳಲ್ಲಿ ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

ವಿಶ್ವವಿದ್ಯಾನಿಲಯುದ ಕ್ರೀಡಾ ನಿರ್ದೇಶಕರಾದ ಪ್ರೊ. ಕೆ. ಶಿವಶಂಕರ್ ಮತ್ತು ಕ್ರೀಡಾ ಸಮನ್ವಯಾಧಿಕಾರಿ ಮಹಮ್ಮದ್ ಸಿಬ್ಗತ್ ಉಲ್ಲಾ ನೇತೃತ್ವ ವಹಿಸಿದ್ದರು.

**ಸಂಭ್ರಮಿಸಿದ ತಾರಾ ಜೋಡಿ**

ಜೂನ್ 30ರಂದು ಸೆಂಟ್ರಲ್ ಕಾಲೇಜಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ನಡೆದ ಬಿಸಿಯು ಉತ್ಸವದ ಸಮಾರೋಪ ಸಮಾರಂಭದಲ್ಲಿ ಕನ್ನಡ ಚಿತ್ರರಂಗದ ಉದಯೋನ್ಮುಖ ತಾರೆಯರಾದ ವಿನಯ್ ರಾಜ್ ಕುಮಾರ್ ಮತ್ತು ಮೇಘಾ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಜೇತ–ರಿಗೆ ಬಹುಮಾನಗಳನ್ನು ವಿತರಿಸಿದರು. ಪ್ರಾಣಿಶಾಸ್ತ್ರ ವಿಭಾಗದ ತಂಡ ಅತ್ಯುತ್ತಮ ಪ್ರದರ್ಶನಕ್ಕಾಗಿ ಚಾಂಪಿಯನ್ ಟ್ರೋಫಿ ಪಡೆದುಕೊಂಡಿತು.

ಕಾಲೇಜು ದಿನಗಳ ವಿದ್ಯಾರ್ಥಿ ಜೀವನದ ತಮ್ಮ ಸವಿನೆನಪುಗಳನ್ನು ಅವರು ಹಂಚಿಕೊಂಡರು. ಈರ್ವರೂ ತಾರೆಯರು ಬಿಡುಗಡೆಗೆ ಸಜ್ಜಾಗಿರುವ ತಮ್ಮ ಅಭಿನಯದ 'ಗ್ರಾಮಾಯಣ' ಚಿತ್ರದ ಗೀತೆಗಳಿಗೆ ವಿದ್ಯಾರ್ಥಿಗಳೊಂದಿಗೆ ಹೆಜ್ಜೆ ಹಾಕಿ ನರ್ತಿಸಿ ಸಭಿಕರಿಂದ ಶುಭಾಶೀರ್ವಾದ ಕೋರಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್.ಬಿ. ಮಾತನಾಡಿ ಮುಂದಿನ ಶೈಕ್ಷಣಿಕ ವರ್ಷದಿಂದ ಅಂತರ ಕಾಲೇಜು ಮಟ್ಟದ ಉತ್ಸವ ಆಯೋಜಿಸುವುದಾಗಿ ಪ್ರಕಟಿಸಿದರು. ವಿಜೇತ ವಿದ್ಯಾರ್ಥಿಗಳನ್ನು ಅಭಿನಂದಿಸಿದ ಅವರು ವಲಯ ಮತ್ತು ಅಖಿಲ ಭಾರತ ಮಟ್ಟದ ಸ್ಪರ್ಧೆಗಳಿಗೂ ಸನ್ನದ್ಧರಾಗುವಂತೆಉತ್ತೇಜಿಸಿದರು.

ಉತ್ಸವದ ಸಂಯೋಜಕರಾದ ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ .ಬಿ.ಕುಡೇನಟ್ಟಿ ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ. ಪ್ರಿಯಾಂಕ ಅರೆಮನೆ ಅತಿಥಿಗಳನ್ನು ಪರಿಚಯಿಸಿದರು. ಡಾ.ಪ್ರಭು.ಬಿ. ಎಂ. ವಿಜೇತ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸಿದರು. ವಿದ್ಯಾರ್ಥಿಗಳಾದ ಚರಣ್ ಮತ್ತು ಮೋಕ್ಷಾ ಕಾರ್ಯಕ್ರಮ ನಿರೂಪಿಸಿದರು. ಡಾ.ಮಂಜು.ಸಿ. ಎನ್. ಮತ್ತು ತಂಡದವರು ವಿಶ್ವವಿದ್ಯಾನಿಲಯದ ಆಶಯ ಗೀತೆಯನ್ನು ಪ್ರಸ್ತುತಪಡಿಸಿದರು. ಸೌಮ್ಯ ಮತ್ತು ತಂಡದವರು ಪ್ರಾರ್ಥನಾಗೀತೆ ಹಾಡಿದರು. ಡಾ.ಡಿ.ಎಸ್.ಪ್ರವೀಣವಂದಿಸಿದರು.

ಕುಲಸಚಿವರಾದ ಎ. ನವೀನ್ ಜೋಸೆಫ್. ವಿತ್ತಾಧಿಕಾ–ರಿಗಳಾದ ಎಂ.ವಿ.ವಿಜಯಲಕ್ಷ್ಮಿ ಹಾಗೂ ಸಿಂಡಿಕೇಟ್ ಸದಸ್ಯರಾದ ಕೆ.ಪಿ.ಪಾಟೀಲ್, ವಿ.ಎನ್. ಶಿಲ್ಪಶ್ರೀ, ಡಾ. ಬಿ.ಆರ್.ಸುಪ್ರೀತ್. ಡಾ. ಫ್ರಾನ್ಸಿಸ್ ಅಲ್ಮೈಡಾ, ಡಾ.ಮಹಂತಗೌಡ, ಡಾ.ಬಿ.ಎಸ್.ಲೋಕೇಶ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ. ಕೃಷ್ಣಮೂರ್ತಿ, ಎನ್.ಟಿ.ಶ್ರೀನಿವಾಸ್ ಉಪಸ್ಥಿತ–ರಿದ್ದರು.

ಉತ್ಸವದ ಯಶಸ್ಸಿಗೆ ಶ್ರಮಿಸಿದ ಸಮಿತಿಯ ಸದಸ್ಯ–ರಿಗೆ, ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿಗೆ ಪ್ರೊ. ರಮೇಶ. ಬಿ.ಕುಡೇನಟ್ಟಿ ವಿಶೇಷ ಧನ್ಯವಾದ ಸಮರ್ಪಿಸಿದರು.

**–ನಿತಿನ್, ದ್ವಿತೀಯ ಎಂಸಿಜೆ**











# ಸಮಕಾಲೀನ ಭಾರತದಲ್ಲಿ ಸಾಂವಿಧಾನಿಕ ರಕ್ಷಣೆ ಮತ್ತು ಸಾಮಾಜಿಕ ಪರಿವರ್ತನೆ

ಕರ್ನಾಟಕ ರಾಜ್ಯವೂ ಸೇರಿದಂತೆ ದೇಶದಲ್ಲಿ ಚಾಲ್ತಿಯಲ್ಲಿರುವ ಹೊರಗುತ್ತಿಗೆ ನೇಮಕಾತಿ ಪದ್ಧತಿ ಸಾಮಾಜಿಕ ನ್ಯಾಯ ತತ್ವ ಮತ್ತು ಸಂವಿಧಾನದ ಸಮಾನತೆಯ ಗುರಿ ಸಾಧನೆಗೆ ಕಂಟಕಪ್ರಾಯವಾಗಿದೆ ಎಂದು ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷರಾದ ಎಚ್. ಕಾಂತರಾಜ್ ಎಚ್ಚರಿಸಿದ್ದಾರೆ.

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಓ.ಬಿ.ಸಿ ಮತ್ತು ಅಲ್ಪಸಂಖ್ಯಾತರ ಘಟಕದ ವತಿಯಿಂದ ಜೂನ್ 10ರಂದು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದ್ದ ವಿಚಾರಸಂಕಿರಣದಲ್ಲಿ ಪ್ರಧಾನ ಭಾಷಣ ಮಾಡಿದ ಅವರು ಈ ಬಗ್ಗೆ ಗಂಭೀರ ಸಾರ್ವಜನಿಕ ಸಂವಾದ ಅಗತ್ಯವೆಂದು ಪ್ರತಿಪಾದಿಸಿದರು.

ರಾಜ್ಯದಲ್ಲಿ ಸುಮಾರು ಶೇಕಡಾ 40 ರಷ್ಟು ಉದ್ಯೋಗಗಳನ್ನು ಹೊರಗುತ್ತಿಗೆ ಮೂಲಕವೇ ಭರ್ತಿ ಮಾಡಲಾಗುತ್ತಿದ್ದು ಯಾವುದೇ ಮೀಸಲಾತಿ ನಿಯಮ ಪಾಲಿಸದಿರುವುದರಿಂದ ದಲಿತ ಮತ್ತು ಹಿಂದುಳಿದ ವರ್ಗಗಳ ಜನರಿಗೆ ವಂಚನೆಯಾಗಿದೆ ಎಂದು ಅವರು ವಿಶ್ಲೇಷಿಸಿದರು.



ವಿಚಾರಸಂಕಿರಣದಲ್ಲಿ ಎಚ್.ಕಾಂತರಾಜ್, ರಮೇಶ್ ಬಾಬು, ಪ್ರೊ.ರಮೇಶ್.ಬಿ. ಪಾಲ್ಗೊಂಡರು.

ಸಾಮಾಜಿಕ ಸಮಾನತೆಯ ಉದ್ದೇಶದಿಂದ ಸಂವಿಧಾನದಲ್ಲಿ ಖಾತರಿಪಡಿಸಲಾಗಿರುವ ಮೀಸಲಾತಿ ಸೌಲಭ್ಯದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸದ್ಯ ಮುನ್ನೆಲೆಗೆ ಬಂದಿರುವ ಒಳಮೀಸಲಾತಿ, ಕೆನೆಪದರ ಪ್ರಸ್ತಾಪ ಮತ್ತು ಮತಾಂತರಗೊಂಡವರ ಹಕ್ಕುಗಳ ಬಗ್ಗೆಯೂ ಚರ್ಚೆಯಾಗಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯರಾದ ರಮೇಶ್ ಬಾಬು ಸ್ವಾತಂತ್ರ್ಯ ಆಂದೋಲನದ ಮೂಲಕ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರಹೊಮ್ಮಿರುವ ಭಾರತದ ಸಂವಿಧಾನ ಜಗತ್ತಿಗೇ ಮಾದ-ರಿಯಾಗಿದೆ ಎಂದು ವಿವರಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗೂ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆಗೆ ಭದ್ರತೆ ಒದಗಿಸುವ ಮೂಲಕ ಭಾರತದ ಸಂವಿಧಾನ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಎತ್ತಿಹಿಡಿದಿದೆ ಎಂದು ಅವರು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್.ಬಿ. ಅವರು ಮಾತನಾಡಿ ಜಾತ್ಯತೀತ, ಪ್ರಜಾಸತ್ತಾತ್ಮಕ ಮತ್ತು ಸಮಸಮಾಜ ನಿರ್ಮಾಣದ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿ ನಿರ್ವಹಿಸಲು ವಿದ್ಯಾರ್ಥಿಗಳು ಸಂವಿಧಾನದ ಆಶಯಗಳ ಬಗ್ಗೆ ಗಂಭೀರ ಅಧ್ಯಯನ ಮತ್ತು ಚರ್ಚೆ ನಡೆಸಬೇಕೆಂದು ಉತ್ತೇಜಿಸಿದರು.

ಸಿಂಡಿಕೇಟ್ ಸದಸ್ಯರಾದ ಶಿವಕುಮಾರ್‌ರವರು ಸಂವಿಧಾನದ ಮೂಲ ಆಶಯಗಳ ಮಹತ್ವವನ್ನು ವಿವರಿಸಿದರು. ಓಬಿಸಿ ಮತ್ತು ಅಲ್ಪಸಂಖ್ಯಾತರ ಘಟಕದ ವಿಶೇಷಾಧಿಕಾ-ರಿಯಾದ ಪ್ರೊ. ಎಂ.ನಿರ್ಮಲ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪನ್ಯಾಸಕರಾದ ಡಾ. ನಾಗರಾಜ್.ಆರ್.ಕೆ. ಕಾರ್ಯಕ್ರಮ ನಿರೂಪಿಸಿದರು.

**–ಡಾ.ಪ್ರಕಾಶ್ ಡಿ.ಎನ್.**
**ಅಧ್ಯಾಪಕರು, ಸಮಾಜಶಾಸ್ತ್ರ**

## ಸಂವಾದ ಗೋಷ್ಠಿ

"ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಅಂಚಿನಲ್ಲಿರುವ ಸಮುದಾಯಗಳಿಗೆ ಸಾಂವಿಧಾನಿಕ ರಕ್ಷಣೆ" ಸಂವಾದದಲ್ಲಿ ಕಲ್ಬುರ್ಗಿ ಕೇಂದ್ರೀಯ ವಿವಿಯ ಡಾ. ಕೆ. ಕಿರಣ್ ಗಾಜನೂರ್ ಮತ್ತು ರಾಷ್ಟ್ರೀಯ ಕಾನೂನು ವಿವಿಯ ಡಾ. ಆರ್.ವಿ.ಚಂದ್ರಶೇಖರ್ ಪಾಲ್ಗೊಂಡರು. ಬೆಂಗಳೂರು ವಿವಿಯ ಪ್ರೊ. ಡಿ.ಕೆ. ಚಿತ್ತಯ್ಯ ಪೂಜಾರ್ ಅಧ್ಯಕ್ಷತೆ ವಹಿಸಿದ್ದರು. "ಸಾಮಾಜಿಕ ಪರಿವರ್ತನೆಯಲ್ಲಿ ಸಮಕಾಲೀನ ಸವಾಲುಗಳು" ಸಂವಾದದಲ್ಲಿ KSOUನ ಡಾ-ಜಯಪಾಲ್ ಮತ್ತು ನೈರುತ್ಯ ರೈಲ್ವೆ ಅಧಿಕಾರಿ ಡಾ. ಕುಸುಮ ಹರಿಪ್ರಸಾದ್ ಪಾಲ್ಗೊಂಡರು. ಮಹಾರಾಣಿ ಕ್ಲಸ್ಟರ್ ವಿವಿ ಕುಲಪತಿ ಪ್ರೊ. ಕೆ.ವೈ. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

# ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ವಿತರಣೆ– ಸಂವಾದ ಕಾರ್ಯಕ್ರಮ

ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಕೇಂದ್ರ ಸರ್ಕಾರದಿಂದ ದೊರೆಯಬೇಕಾದ ಅನುದಾನ ಪಡೆದುಕೊಳ್ಳುವ ದೃಷ್ಟಿಯಿಂದ ನೆನೆಗುದಿಗೆ ಬಿದ್ದಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಆದಷ್ಟು ಬೇಗ ನಡೆಸುವ ಬಗ್ಗೆ ರಾಜ್ಯದ ನೂತನ ಮುಖ್ಯಮಂತ್ರಿಯವರು ಗಂಭೀರ ಗಮನ ಹರಿಸಬೇಕಾದ ಅಗತ್ಯವಿದೆ ಎಂದು 5ನೇ ರಾಜ್ಯ ಹಣ-ಕಾಸು ಆಯೋಗದ ಅಧ್ಯಕ್ಷರು ಹಾಗೂ ಮಾಜಿ ಸಂಸದರಾದ ಡಾ. ಸಿ. ನಾರಾಯಣಸ್ವಾಮಿ ಪ್ರತಿಪಾದಿಸಿದರು.

ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯ (ಐಐಪಿಎ) ಕರ್ನಾಟಕ ಶಾಖೆ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಂಟಿ ಸಹಯೋಗದಲ್ಲಿ ಜೂನ್ 3ರಂದು ಆಯೋಜಿಸಲಾಗಿದ್ದ ಸಂವಾದ ಕಾರ್ಯಕ್ರಮದಲ್ಲಿ "ಸ್ಥಳೀಯ ಸಂಸ್ಥೆಗಳಿಗೆ ಹಣ-ಕಾಸು ವಿತರಣೆ–5ನೇ ಕರ್ನಾಟಕ ರಾಜ್ಯ ಹಣಕಾಸು ಆಯೋಗದ ವರದಿ" ಎಂಬ ವಿಷಯದ ಕುರಿತು ಅವರು ಪ್ರಧಾನ ಭಾಷಣ ಮಾಡಿದರು. 1993ರಲ್ಲಿ ಜಾರಿಗೊಂಡ 73 ಮತ್ತು 74ನೇ ಸಂವಿಧಾನ ತಿದ್ದುಪಡಿಗಳ ದೆಸೆಯಿಂದಾಗಿ ಸ್ಥಳೀಯ ಸಂಸ್ಥೆಗಳ ಸಬಲೀಕರಣ ಮತ್ತು ಅಧಿಕಾರ ವಿಕೇಂದ್ರೀಕರಣದ ಹೊಸ ಮನ್ವಂತರಕೆ ನಾಂದಿಯಾಯಿತೆಂದು ಅವರು ವಿವರಿಸಿದರು. ಕೇಂದ್ರ ಹಣಕಾಸು ಆಯೋಗದ ಷರತ್ತುಗಳ ಪಾಲನೆಯಲ್ಲಿ ವಿಫಲವಾದ ಕಾರಣ ಹಣ-ಕಾಸಿನ ನೆರವು ಸ್ಥಗಿತಗೊಂಡು ರಾಜ್ಯದ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಕಾರ್ಯಗಳಿಗೆ ಆರ್ಥಿಕ ಹಿನ್ನಡೆಯಾಗಿ ಪ್ರಗತಿ ಕುಂಠಿತವಾಗಿದೆ ಎಂದು ಅವರು ವಿಷಾದಿಸಿದರು.

ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಎಲ್. ಕೆ.ಅತೀಕ್ ರವರು ಕರ್ನಾಟಕ



ಸಂವಾದದಲ್ಲಿ ಮಾಜಿ ಸಂಸದ ಸಿ.ನಾರಾಯಣಸ್ವಾಮಿ ಮತ್ತು ಇತರೆ ಗಣ್ಯರು ಭಾಗವಹಿಸಿದ್ದರು.

ಸರ್ಕಾರ ಸಾಮಾಜಿಕ ನ್ಯಾಯದ ಗ್ಯಾರಂಟಿ ಯೋಜನೆಗಳ ಪರಿಣಾಮವಾಗಿ ತಲಾ ಆದಾಯದಲ್ಲಿ ಕರ್ನಾಟಕ ರಾಜ್ಯ ದೇಶದಲ್ಲೇ ಮೊದಲ ಸ್ಥಾನಕ್ಕೇ-ರಿದೆ ಎಂದು ತಿಳಿಸಿದರು. ಸಂವಾದ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಮುಖ್ಯ ಕಾರ್ಯದರ್ಶಿ ಹಾಗೂ ಐಐಪಿಎ ಕರ್ನಾಟಕ ಶಾಖೆಯ ಅಧ್ಯಕ್ಷರಾದ ತ.ಮ.ವಿಜಯಭಾಸ್ಕರ್ ಅಧಿಕಾರ ವಿಕೇಂದ್ರೀಕರಣ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವ ದಕ್ಷಿಣದ ರಾಜ್ಯಗಳು ಹೆಚ್ಚಿನ ಅಭಿವೃದ್ಧಿ ಸಾಧಿಸಿವೆ ಎಂದು ವಿಶ್ಲೇಷಿಸಿದರು. ರಾಜ್ಯ ಹಣಕಾಸು ಆಯೋಗದ ಸದಸ್ಯರಾದ ಸನಾವುಲ್ಲಾ, ಹಿರಿಯ ಪ್ರಾಧ್ಯಾಪಕರಾದ ಡಾ.ಕೆ. ಗಾಯತ್ರಿ ಮತ್ತು ಡಾ.ಎನ್.ಶಿವಣ್ಣ ವರದಿಯ ವಿವಿಧ ಆಯಾಮಗಳ ಬಗ್ಗೆ ಬೆಳಕು ಚೆಲ್ಲಿದರು. ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಆಯೋಗದ ಅಧ್ಯಕ್ಷರಾದ ಡಿ.ಆರ್.ಪಾಟೀಲ್, ಕುಲಸಚಿವರಾದ ಎ. ನವೀನ್ ಜೋಸೆಫ್, ಐಐಪಿಎ ಕಾರ್ಯದರ್ಶಿ ಡಾ.ಡಿ.ಜೀವನ್ ಕುಮಾರ್, ಉಪಸ್ಥಿತ-ರಿದ್ದರು. ಕಲಾ ನಿಕಾಯದ ಡೀನರಾದ ಪ್ರೊ. ಜ್ಯೋತಿ ವೆಂಕಟೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ.ಮಾಲಿನಿ.ಎಂ. ಕಾರ್ಯಕ್ರಮ ನಿರೂಪಿಸಿದರು.

# ಉಚಿತ ಆರೋಗ್ಯ ತಪಾಸಣಾ ಶಿಬಿರ

ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 'ಯುವ ರೆಡ್‌ಕ್ರಾಸ್' ಕೋಶದ ವತಿಯಿಂದ ಜೂನ್ 2ರಂದು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿವರ್ಗದವರಿಗಾಗಿ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗೂ ನಾರಾಯಣ ನೇತ್ರಾಲಯದಿಂದ ನೇತ್ರದಾನ ನೋಂದಣಿ ಅಭಿಯಾನ ಆಯೋಜಿಸಲಾಗಿ-ತ್ತು.

ನೂತನ ಶೈಕ್ಷಣಿಕ ವಿಭಾಗದ





ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿದ ಕುಲಪತಿಯವರೊಂದಿಗೆ ಅತಿಥಿ ಗಣ್ಯರು.

ಕಟ್ಟಡದಲ್ಲಿ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರ, ಬೆಂಗಳೂರು ಲಯನ್ಸ್ ಕ್ಲಬ್ ಮತ್ತು ಸರ್ಕಾರಿ ದಂತವೈದ್ಯ ಕಾಲೇಜಿನ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಈ ಕಾರ್ಯಕ್ರಮವನ್ನು ಕುಲಪತಿಗಳಾದ ಪ್ರೊ.ರಮೇಶ್.ಬಿ. ಉದ್ಘಾಟಿಸಿದರು.

ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ವಿದ್ಯಾರ್ಥಿಗಳು, ಬೋಧಕ-ಬೋಧಕೇತರ ನೌಕರರು ಹಾಗೂ ಸ್ವಚ್ಛತಾ ಮತ್ತು ಭದ್ರತಾ ಸಿಬ್ಬಂದಿಯ ಆರೋಗ್ಯ ಸಂರಕ್ಷಣೆಯ ಉದ್ದೇಶದಿಂದ ಈ ವೈದ್ಯಕೀಯ ತಪಾಸಣಾ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಅವರು ವಿವರಿಸಿದರು. ಕುಲಸಚಿವರಾದ ನವೀನ್ ಜೋಸೆಫ್. ವಿತ್ತಾಧಿಕಾ-ರಿಗಳಾದ ಎಂ.ವಿ.ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಡಾ.ಕೃಷ್ಣರಾಮ್, ಕೆ.ಪಿ.ಪಾಟೀಲ್, ಶಿಲ್ಪಶ್ರೀ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ.ಅಬ್ದುಲ್‌ಖಾದರ್. ಡಾ.ಬಿ.ಕೆ. ಗಿರಿ, ಉತ್ಕರ್ಷ್ ಲೋಕೇಶ್. ಪ್ರಸಾರಾಂಗ ನಿರ್ದೇಶಕರಾದ ಡಾ.ಟಿ.ಎನ್. ತಾಂಡವಗೌಡ, ಯುವ ರೆಡ್‌ಕ್ರಾಸ್ ನೋಡಲ್ ಅಧಿಕಾರಿಯಾದ ಡಾ. ಗೋವಿಂದೇಗೌಡ, ಲಯನ್ಸ್ ಕ್ಲಬ್ ನಿರ್ದೇಶಕರಾದ ಪ್ರಕೃತಿ ಪ್ರಸನ್ನ, ಹಿರಿಯ ಪ್ರಾಧ್ಯಾಪಕರಾದ ಪ್ರೊ.ಕೆ.ಆರ್.ಜಲಜಾ, ಪ್ರೊ. ಜ್ಯೋತಿ ವೆಂಕಟೇಶ್, ಪ್ರೊ. ನಿರ್ಮಲ.ಎಂ., ಪ್ರೊ.ರಿತಿಕಾ ಸಿನ್ಹಾ, ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ದೀಪಾ ಸಮಾರಂಭದಲ್ಲಿ ಉಪಸ್ಥಿತ-ರಿದ್ದರು.

ಸಾಮಾನ್ಯ ಆರೋಗ್ಯ, ದಂತ ಪರೀಕ್ಷೆ, ನೇತ್ರ ಪರೀಕ್ಷೆ, ಹೃದ್ರೋಗ, ಇ.ಎನ್.ಟಿ, ಕ್ಯಾನ್ಸರ್, ಚರ್ಮ ರೋಗ, ಮೂಳೆ ಚಿಕಿತ್ಸೆ ಮುಂತಾದ ಅನೇಕ ವಿಧದ ತಪಾಸಣೆ ಸೌಲಭ್ಯವನ್ನು ಸಂಪೂರ್ಣ ಉಚಿತವಾಗಿ ಒದಗಿಸಲಾಯಿತು. ಇದಲ್ಲದೆ ಅಭಿ ಆಯುರ್ ಸಂಸ್ಥೆಯ ವತಿಯಿಂದ ಆಯುರ್ವೇದ ಶುಶ್ರೂಷೆ ನೀಡಲಾಯಿತು. ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಆರೋಗ್ಯ ಶಿಬಿರದ ಪ್ರಯೋಜನ ಪಡೆದರು.

# "ಪರಿಸರ ಸಂರಕ್ಷಣೆ – ಯುವ ಪೀಳಿಗೆಯ ಹೊಣೆ" : ಬಸವರಾಜ ಹೊರಟ್ಟಿ



ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಸಭಾಪತಿ ಬಸವರಾಜ ಹೊರಟ್ಟಿ ಸಸಿ ನೆಟ್ಟು ನೀರೆರೆದರು.

ಭವಿಷ್ಯದ ಹಿತದೃಷ್ಟಿಯಿಂದ ವಿದ್ಯಾಸಂಸ್ಥೆಗಳು ಯುವ ಪೀಳಿಗೆಯಲ್ಲಿ ಪರಿಸರ ಜಾಗೃತಿ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಬೇಕಾದ ಅಗತ್ಯವಿದೆ ಎಂದು ವಿಧಾನ ಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿಯವರು ಪ್ರತಿಪಾದಿಸಿದ್ದಾರೆ.

ವಿಶ್ವವಿದ್ಯಾನಿಲಯದ ಪರಿಸರ ಮತ್ತು ಹವಾಮಾನ ಬದಲಾವಣೆ ಅಧ್ಯಯನ ವಿಭಾಗದಿಂದ ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ಜೂನ್ 5ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಕೃತಿ ಪ್ರೇಮದ ಗುಣವನ್ನು ರೂಢಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆಯಿತ್ತರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ಬಿ.ರಮೇಶ್ ಮಾತನಾಡಿ, ಜಾಗತಿಕ ತಾಪಮಾನ ಮತ್ತು ಹವಾಮಾನ ವೈಪ-ರೀತ್ಯ ಹಾಗೂ ವಾಯು–ಜಲ ಮಾಲಿನ್ಯದ ಪರಿಣಾಮವಾಗಿ ಜೀವ ವೈವಿಧ್ಯತೆಗೆ ಅಪಾಯ ಬಂದೊದಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆ ತಡೆಗಟ್ಟಿ ಪರಿಸರ ಸಮತೋಲನ ಕಾಯ್ದುಕೊಳ್ಳಲು ಪಣ ತೊಡುವ ಮೂಲಕ ಭವಿಷ್ಯದ ಬದುಕನ್ನು ಉತ್ತಮಗೊಳಿಸುವತ್ತ ಕಾರ್ಯೋನ್ಮುಖರಾಗುವಂತೆ ಅವರು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ವಿಧಾನ ಪರಿಷತ್ತಿನ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕುಲಸಚಿವರಾದ ಎ. ನವೀನ್ ಜೋಸೆಫ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ.ಬಿ.ಕುಡೇನಟ್ಟಿ, ವಿಭಾಗ ಮುಖ್ಯಸ್ಥರಾದ ಪ್ರೊ. ಪಿ.ಆರ್.ಚೇತನ ಹಾಗೂ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಉಪಸ್ಥಿತರಿದ್ದರು. ಲಯನ್ಸ್ ಕ್ಲಬ್ ನಿರ್ದೇಶಕರಾದ ಪ್ರಕೃತಿ ಪ್ರಸನ್ನ ಪರಿಸರ ದಿನಾಚರಣೆ ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದ ಭಾಗವಾಗಿ ಕ್ಯಾಂಪಸ್ ಆವರಣದಲ್ಲಿ ಅನೇಕ ಗಿಡಗಳನ್ನು ನೆಡಲಾಯಿತು.

# MOU with Radaptive Inc. California

Dr.Manmohan Singh Bengaluru City University has entered into a Memorandum of Understanding with Radaptive Inc., California, USA, with the objective of creating skill-based employability opportunities for students.

The MOU was formally signed in Bengaluru on 9th June 2026 by the Registrar, Naveen Joseph A. on behalf of the University, and Sudha Dev, Vice President, on behalf of Radaptive Inc.

Vice-Chancellor Prof. Ramesh.B. exchanged the documents with the representative of the U.S.-based organization. He explained that the initiative aims to provide technology-oriented skill training to students of the social sciences also, thereby enhancing their employability and professional competencies.



VC Prof. Ramesh.B. exchanging MOU documents with Mrs.Sudha Dev

Speaking on the occasion, Sudha Dev proposed providing appropriate guidance and capacity-building support to faculty members, along with curriculum revisions aligned with contemporary industry requirements.

The MOU further seeks to integrate Social Work education with technology, digital tools, and artificial intelligence, with the broader objective of strengthening community engagement and inclusivity while creating meaningful social impact.

Prof.Ramesh.B.Kudenatti, Registrar(Evaluation); Dr.H.Krishnaram and Dr. Francis Assisi Almeida, Syndicate Members; Dr. Abdul Khader, Member of the Academic Council; senior faculty members Prof.M.Nirmala, Prof Ritika Sinha, Prof. Medha Itagi Huyilgola; and Dr.T.N. Thandava Gowda were also present on the occasion.

**-Kushboo Kuwar R, Dept. of MCJ**

# Israel–Iran conflict: Impact on Geopolitics

A guest lecture on the above topic was organised by the Department of Political Science on 12June 2026. Dr K.C.Suresha, Associate Professor, Department of Studies and Research in Public Administration, Tumkur University provided valuable insights into the historical background of Israel–Iran conflict and its implications for contemporary international politics. The resource person explained that prior to the1979 Iranian Revolution, Iran maintained cordial relations with both Israel and the United States. However, the establishment of the Islamic Republic transformed these relations, leading to ideological and strategic rivalry between Iran and Israel. The lecture highlighted how historical developments continue to shape present-day conflicts and diplomatic tensions. He also analysed the role of American hegemony in the Middle East, particularly the strategic alliance between United States and Israel, and its influence on regional power dynamics. The geopolitical consequences of the conflict on international security, energy politics, and global stability were also highlighted.

# Mining Greed Ravaging Rock Art Heritage

A special lecture on "Rock Art Studies in Kannada Region" was organised by the Department of History on 20th June 2026. Dr.R.Mohana, Assistant Professor, Department of Ancient Indian History, Culture and Archaeology, University of Allahabad, provided an in-depth overview of the rich rock art heritage of Karnataka, highlighting various forms of prehistoric art including petroglyphs, pictographs, engravings and cupules dating back to the Neolithic period (approximately 4000–2000 BCE).

He focused on the important rock art sites located in different parts of Karnataka, particularly in the Malaprabha and Tungabhadra river basins. He explained that these regions contain numerous painted rock shelters featuring



Rock Art Painting at Malaprabha

depictions of wild animals, human figures and unique geometric designs. He noted that the variations in rock art styles are largely influenced by the geological conditions and nature of the rock surfaces.

Expressing concern over the destruction of this priceless heritage, Dr. Mohana highlighted the threats posed by quarrying activities, vandalism and the lack of awareness among local communities. Dr.Aruni, Director, Southern Regional Centre of the Indian Council of Historical Research (ICHR), stated that while only around 80 rock art sites were known earlier in Karnataka, more than 300 sites have been identified through Dr. Mohana's efforts. He also highlighted the career opportunities available for students in the field of archaeology. The programme was compered by Dr.Purushottama, and Merlin Freeda extended the vote of thanks.

**-Dr. Malini. M, Faculty.**

# ಸಾಮಾಜಿಕ ಪರಿವರ್ತನೆಗೆ ಪರಿಶ್ರಮಿಸಲು ವಿದ್ಯಾರ್ಥಿಗಳಿಗೆ ಪ್ರೇರಣೆ

ಸಮಾಜ ಕಾರ್ಯ ಕಾರ್ಯಕರ್ತರು ಸಾಮಾಜಿಕ ಪರಿವರ್ತನೆಗೆ ಪೂರಕವಾದ ವೇಗವರ್ಧಕ ಶಕ್ತಿಯಾಗಿ ಕಾರ್ಯನಿರ್ವಹಿಸಬೇಕೆಂದು ಮಕ್ಕಳ ಹಕ್ಕುಗಳ ಟ್ರಸ್ಟಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ವಾಸುದೇವ ಶರ್ಮ ಪ್ರತಿಪಾದಿಸಿದರು.

Dr.MSBCU ಸಮಾಜ ಕಾರ್ಯ ವಿಭಾಗದ ವತಿಯಿಂದ ಏರ್ಪಡಿಸಲಾಗಿದ್ದ ಮೂರು ದಿನಗಳ ಕಾರ್ಯಾಗಾರದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು ಸಮಾಜದ ಸುಸ್ಥಿರ ಅಭಿವೃದ್ಧಿಯ ಹಾದಿಯಲ್ಲಿ ಸಮಾಜ ಕಾರ್ಯ ಕಾರ್ಯಕರ್ತರ ಪಾತ್ರ ಬಹುಮುಖ್ಯವೆಂದು ಅಭಿಪ್ರಾಯಪಟ್ಟರು.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳ ಸಮರ್ಥ ಬಳಕೆಯ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧನೆಯತ್ತ ಸಾಗುವಂತೆ ಜನಸಮುದಾಯಗಳನ್ನು ಜಾಗೃತಗೊಳಿಸುವ ಹೊಣೆಗಾರಿಕೆ ಸಮಾಜ ಕಾರ್ಯ ಕಾರ್ಯಕರ್ತರದ್ದಾಗಿದೆ ಎಂದು ಅವರು ವಿಶ್ಲೇಷಿಸಿದರು.

ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಕುಲಪತಿಗಳಾದ ಪ್ರೊ. ರಮೇಶ್.ಬಿ.ರವರು ಸಮಾಜ ಕಾರ್ಯ ಕಾರ್ಯಕರ್ತರಿಗೆ ಎಲ್ಲ ಕ್ಷೇತ್ರಗಳಲ್ಲೂ ಅಪಾರ ಬೇಡಿಕೆಯಿದ್ದು ಜನರೊಂದಿಗೆ ಸಂವಾದಿಸುವ ಉತ್ತಮ ಸಂವಹನ ಕಲೆಯನ್ನು ರೂಪಿಸಿಕೊಳ್ಳಲು ಸಲಹೆಯಿತ್ತರು.

ಕುಲಸಚಿವರಾದ ಎ. ನವೀನ್ ಜೋಸೆಫ್, ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ಪ್ರೊ. ರಿತಿಕಾ ಸಿನ್ಹಾ, ಪ್ರಸಾರಾಂಗ ನಿರ್ದೇಶಕರಾದ ಡಾ. ಟಿ.ಎನ್. ತಾಂಡವಗೌಡ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ.ರಶ್ಮಿ ಕಾರ್ಯಕ್ರಮ ನಿರೂಪಿಸಿದರು ಮತ್ತು ವಾಣಿಶ್ರೀ ಸ್ವಾಗತಿಸಿದರು.



ಸಮಾಜಕಾರ್ಯ ಕಾರ್ಯಾಗಾರ: ಮುಖ್ಯ ಅತಿಥಿ ಡಾ.ವಾಸುದೇವ ಶರ್ಮರೊಂದಿಗೆ ಗಣ್ಯರು.

# 'ಜನಮುಖಿ–2026' ಸಮಾಜ ಕಾರ್ಯ ಶಿಬಿರ

Dr.MSBCU ಸಮಾಜ ಕಾರ್ಯ ಅಧ್ಯಯನ ವಿಭಾಗದ ವತಿಯಿಂದ ರಾಮನಗರ ಜಿಲ್ಲೆಯ ಬಿಡದಿ ಹೋಬಳಿಯ ವಿಭೂತಿಕೆರೆ ಪಂಚಾಯ್ತಿ ವ್ಯಾಪ್ತಿಯ ಕುಂಭಾಪುರ ಕಾಲೋನಿಯಲ್ಲಿ ಜೂನ್ 1ರಿಂದ 5 ರವರೆಗೆ ಐದು ದಿನಗಳ ಕಾಲ 'ಜನಮುಖಿ–2026' ಸಮಾಜ ಕಾರ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರವನ್ನು ಉದ್ಘಾಟಿಸಿದ ಕುಲಪತಿಗಳಾದ ಪ್ರೊಫೆಸರ್ ರಮೇಶ್.ಬಿ. ಅವರು ಜನಪದರ ನೈಜ ಸಾಮಾಜಿಕ ಜೀವನಶೈಲಿಯ ಅನುಭವ ಮತ್ತು ಸಮಸ್ಯೆಗಳನ್ನು ಪ್ರಾಯೋಗಿಕವಾಗಿ ಅರಿಯುವುದರ ಮೂಲಕ ಶಿಬಿರಾರ್ಥಿಗಳ ಕೌಶಲ್ಯ ಮತ್ತು ಜ್ಞಾನವನ್ನು ಹೆಚ್ಚಿಸುವಲ್ಲಿ ಇದೊಂದು ಮೈಲಿಗಲ್ಲಾಗಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಮನಗರ ಕ್ಷೇತ್ರದ ಶಾಸಕರಾದ ಇಕ್ಬಾಲ್ ಹುಸೇನ್ ಮಾತನಾಡಿ ಯುವಜನರಲ್ಲಿ ಸಮಾಜ ಸೇವಾಮನೋಭಾವ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವ ನಿಟ್ಟಿನಲ್ಲಿ ಇಂತಹ ಚಟುವಟಿಕೆಗಳು ಅತ್ಯವಶ್ಯವಾಗಿದೆ ಎಂದು ಪ್ರತಿಪಾದಿಸಿದರು.

ಶಿಬಿರದ ಪ್ರಯುಕ್ತ ಆರೋಗ್ಯ ತಪಾಸಣೆ, ಸಸಿ ನೆಡುವುದು, ಗ್ರಾಮೀಣ ಸಹಭಾಗಿತ್ವ ಸಮೀಕ್ಷೆ, ಕಿರು ಸಂಶೋಧನೆ, ಸೈಬರ್ ಕ್ರೈಂ, ನೈರ್ಮಲ್ಯ ಜಾಗೃತಿ, ಸ್ಥಳೀಯ ಸಂಪನ್ಮೂಲ ಬಳಸಿ ಆದಾಯ ಸೃಷ್ಟಿ, ಸ್ವಉದ್ಯೋಗ ಮುಂತಾದ ವಿಷಯಗಳ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಬೀದಿ ನಾಟಕ, ಜಾಗೃತಿ ಜಾಥಾ ಹಾಗೂ ಕೌಶಲ್ಯ ಯೋಜನೆ ಮೂಲಕ ಸಮಸ್ಯೆಗಳನ್ನು ಪರಿಹರಿಸುವ ಕುರಿತು ವಿದ್ಯಾರ್ಥಿಗಳು ಪ್ರಾಯೋಗಿಕ ಅನುಭವ ಪಡೆದುಕೊಂಡರು.

**–ವಿಕ್ರಮ್ ಕೆ., ಉಪನ್ಯಾಸಕರು**



ಶಿಬಿರ ಉದ್ಘಾಟಿಸಿದ ಕುಲಪತಿ ಪ್ರೊಫೆಸರ್ ರಮೇಶ್.ಬಿ.ಮತ್ತು ಶಾಸಕ ಇಕ್ಬಾಲ್ ಹುಸೇನ್

# ನೂತನ ತರಬೇತಿ ಮತ್ತು ನೇಮಕಾತಿ ಸಂಸ್ಥೆ ಸ್ಥಾಪನೆ

ರಾಜ್ಯದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ನಿರ್ಗಮಿತ ಪದವೀಧರರಿಗೆ ಸೂಕ್ತ ಉದ್ಯೋಗ ಲಭ್ಯತೆಗೆ ಅಗತ್ಯ ತರಬೇತಿ ಮತ್ತು ಮಾರ್ಗದರ್ಶನ ಒದಗಿಸಲು ವಿನೂತನ ವೇದಿಕೆಯನ್ನು ಇದೀಗ ಆರಂಭಿಸಲಾಗಿದೆ. ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಜೂನ್ 19ರಂದು ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ. ಎಸ್. ಆರ್. ನಿರಂಜನರವರು 'ಕರ್ನಾಟಕ ತರಬೇತಿ ಮತ್ತು ನಿಯೋಜನೆ ಅಧಿಕಾರಿಗಳ ಸಂಘ' (ಕೆ.ಟಿ.ಪಿ.ಓ.ಎ) ಎಂಬ ಸಂಸ್ಥೆಗೆ ಚಾಲನೆ ನೀಡಿದರು.

ವಿಶೇಷ ಅತಿಥಿಯಾಗಿ ಆಗಮಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಮಾತನಾಡಿ ವಿಶ್ವವಿದ್ಯಾಲಯಗಳು ಉದ್ಯಮ ವಲಯದ ಅವಶ್ಯಕತೆಗಳಿಗೆ ಅನುಗುಣವಾಗಿ ಅಧ್ಯಯನ ಮತ್ತು ಸಂಶೋಧನೆ ಕೈಗೊಳ್ಳುವತ್ತ ಹೆಚ್ಚಿನ ಗಮನ ಹರಿಸಬೇಕಾಗಿದೆ ಎಂದು ಪ್ರತಿಪಾದಿಸಿದರು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಪ್ರಾದೇಶಿಕ ನಿರ್ದೇಶಕರಾದ ಕೆ. ಲಕ್ಷ್ಮಿಪ್ರಸಾದ್ ಮಾತನಾಡಿ "ಪ್ರಧಾನ ಮಂತ್ರಿ ಇಂಟರ್ನ್‌ಷಿಪ್ ಯೋಜನೆ"ಯ ಸಂಪೂರ್ಣ ಪ್ರಯೋಜನ ಪಡೆಯುವಂತೆ ನಿರುದ್ಯೋಗಿ ಯುವ ಸಮೂಹಕ್ಕೆ ಸಲಹೆಯಿತ್ತರು.

ಬಿಇಎಲ್ ಅಧಿಕಾರಿ ಎಂ.ಟಿ. ಶರವಣನ್, ಟೆಕ್ ಮಹೀಂದ್ರ ಕಂಪನಿಯ ಸತೀಶ್ ಪಟ್ನಾಯಕ್ ಕೌಶಲ್ಯಾಧಾರಿತ ಉದ್ಯೋಗ ತರಬೇತಿಯ ತುರ್ತು ಅಗತ್ಯದ ಕುರಿತು ವಿವರಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಎ. ನಬಿ ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಕೆಟಿಪಿಓಎ ಪದಾಧಿಕಾರಿಗಳಾದ ಪ್ರೊ. ಎನ್. ರವಿಕುಮಾರ್, ಪ್ರೊ. ಗುರುಚರಣಸಿಂಗ್ ಹಾಗೂ ಡಾ.ಹೇಮಮಾಲಿನಿ ಉಪಸ್ಥಿತರಿದ್ದರು.

## BCಯೋತ್ಸವ 3.0 ಕ್ರೀಡಾ ಕೂಟ




ಅಂತರ ವಿಭಾಗ ಕ್ರೀಡಾಕೂಟ ಉದ್ಘಾಟಿಸಿದ ಕುಲಪತಿಯವರೊಂದಿಗೆ ವಿ.ವಿ. ಅಧಿಕಾರಿಗಳು.

ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿದ್ದ 2025–26ನೇ ಸಾಲಿನ ಕ್ರೀಡಾಕೂಟವನ್ನು ಕುಲಪತಿಗಳಾದ ಪ್ರೊ. ರಮೇಶ್ .ಬಿ. ಉದ್ಘಾಟಿಸಿದರು.

ದೈಹಿಕ ಮತ್ತು ಮಾನಸಿಕ ಸದೃಢತೆಗೆ ಕ್ರೀಡೆ ಅತ್ಯಂತ ಉಪಯುಕ್ತವೆಂದು ತಿಳಿಸಿದ ಅವರು, ಶಿಸ್ತು ಮತ್ತು ತಂಡ ಸ್ಫೂರ್ತಿಯ ಮೂಲಕ ನಾಯಕತ್ವ ಗುಣ ಬೆಳೆಸಿಕೊಳ್ಳಲು ಕ್ರೀಡೆ ನೆರವಾಗುವುದೆಂದು ವಿಶ್ಲೇಷಿಸಿದರು.

ಕುಲಸಚಿವರಾದ ಎ. ನವೀನ್ ಜೋಸೆಫ್, ಪ್ರೊ.ರಮೇಶ. ಬಿ.ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಪ್ರಸಾರಾಂಗ ನಿರ್ದೇಶಕರಾದ ಡಾ.ಟಿ.ಎನ್.ತಾಂಡವಗೌಡ ವೈದ್ಯಾಧಿಕಾರಿ ಡಾ.ದೀಪಾ, ಕ್ರೀಡಾ ನಿರ್ದೇಶಕರಾದ ಪ್ರೊ. ಕೆ. ಶಿವಶಂಕರ್, ಕ್ರೀಡಾ ಸಮನ್ವಯಾಧಿಕಾರಿ ಮಹಮ್ಮದ್ ಸಿಬ್ಗತುಲ್ಲಾ ,ಪ್ರೊ.ಮಹದೇವ ಸ್ವಾಮಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಹಗ್ಗ ಜಗ್ಗಾಟ ದೃಶ್ಯ ವೀಕ್ಷಿಸುತ್ತಿರುವ ಕುಲಪತಿ ಪ್ರೊ. ರಮೇಶ್.ಬಿ ಮತ್ತು ಇತರೆ ಪ್ರಮುಖರು

# ಕರಾವಳಿ ಬದುಕು, ಸಂಸ್ಕೃತಿಯ ಅನಾವರಣ

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ ಪಠ್ಯವನ್ನು ಪ್ರಾಯೋಗಿಕ ಅನುಭವದೊಂದಿಗೆ ಬೆಸೆಯುವ ಉದ್ದೇಶದಿಂದ ಶೈಕ್ಷಣಿಕ ಪ್ರವಾಸ ಆಯೋಜಿಸಲಾಗಿತ್ತು. ಕರಾವಳಿಯ ಬದುಕು, ಸಂಸ್ಕೃತಿ, ಜಾನಪದ, ಕಡಲು ಹಾಗೂ ಪ್ರಕೃತಿಯ ಸೌಂದರ್ಯವನ್ನು ಪರಿಚಯಿಸುವ ನಿಟ್ಟಿನಲ್ಲಿ ಉಡುಪಿ, ಮಲ್ಪೆ, ಕೋಟಾ, ಮರವಂತೆ, ಮುರುಡೇಶ್ವರ, ಹೊನ್ನಾವರದ ಮ್ಯಾಂಗ್ರೋವ್ ಕಾಡುಗಳು ಹಾಗೂ ಯಾಣ ಪ್ರದೇಶಗಳಿಗೆ ಭೇಟಿ ನೀಡಲಾಯಿತು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೋಟಾ ಶಿವರಾಮ ಕಾರಂತರ ಥೀಮ್ ಪಾರ್ಕ್‌ಗೆ ವಿದ್ಯಾರ್ಥಿಗಳು ಭೇಟಿಯಿತ್ತು ಕಾರಂತಜ್ಞನ ಬಹುಮುಖ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ವಿವಿಧ ಕಲಾಕೃತಿಗಳು ಹಾಗೂ ಪ್ರದರ್ಶನಗಳನ್ನು ವೀಕ್ಷಿಸಿದರು. ಕಾರಂತರ ಕಂಚಿನ ಪ್ರತಿಮೆ, ಅವರ ಜೀವನ ಮತ್ತು ಸಾಹಿತ್ಯವನ್ನು ಪ್ರತಿಬಿಂಬಿಸುವ ಕಲಾ ಗ್ಯಾಲರಿ, ಕಾದಂಬರಿಗಳ ಪಾತ್ರಗಳ ಶಿಲ್ಪಗಳು, ಯಕ್ಷಗಾನ ಸಂಸ್ಕೃತಿಯನ್ನು ಬಿಂಬಿಸುವ ಕಲಾಕೃತಿಗಳು, ಗ್ರಾಮೀಣ ಬದುಕಿನ ಸಂಕೇತವಾದ ಎತ್ತಿನಗಾಡಿಯ ಮಾದರಿ ಹಾಗೂ ಕಾರಂತರ ವೈಯಕ್ತಿಕ ಪುಸ್ತಕಗಳ ಸಂಗ್ರಹವಿರುವ ಗ್ರಂಥಾಲಯ ವಿದ್ಯಾರ್ಥಿಗಳ ಕಣ್ಮನ ಸೂರೆಗೊಂಡವು.

ಶಿವರಾಮ ಕಾರಂತರ 'ಬೆಟ್ಟದ ಜೀವ' ಮತ್ತು 'ಮರಳಿ ಮಣ್ಣಿಗೆ' ಕಾದಂಬರಿಗಳ ಅಧ್ಯಯನ ಮಾಡಿದ್ದ ವಿದ್ಯಾರ್ಥಿಗಳಿಗೆ ಕರಾವಳಿ ಪ್ರದೇಶದ ಭೌಗೋಳಿಕ ಸ್ವರೂಪ, ಅಲ್ಲಿನ ಜನರ ಜೀವನಶೈಲಿ, ಆಹಾರ ಸಂಸ್ಕೃತಿ, ಕಡಲನ್ನು ಆಶ್ರಯಿಸಿದ ಬದುಕು, ಮೀನುಗಾರಿಕೆ ಇವುಗಳನ್ನು ನೇರವಾಗಿ ಅವಲೋಕಿಸುವ ಅಪೂರ್ವ ಅವಕಾಶ ದೊರೆಯಿತು.

ಮಲ್ಪೆ ಕಡಲತೀರದ ಅಲೆಗಳ ಸೊಬಗು, ಮರವಂತೆಯಲ್ಲಿ ಒಂದೆಡೆ ಅರಬ್ಬಿ ಸಮುದ್ರ ಹಾಗೂ ಮತ್ತೊಂದೆಡೆ ಸೌಪರ್ಣಿಕಾ ನದಿ ಸಮಾನಾಂತರವಾಗಿ ಹರಿಯುವ ಅಪೂರ್ವ ದೃಶ್ಯ ವಿದ್ಯಾರ್ಥಿಗಳನ್ನು ಮಂತ್ರಮುಗ್ಧರನ್ನಾಗಿಸಿತು.

ಮುರುಡೇಶ್ವರ ಹಾಗೂ ಎಕೋ ಬೀಚ್‌ನಲ್ಲಿ ಸಮುದ್ರದ ಅಲೆಗಳ ಅಬ್ಬರ, ತಂಪಾದ ಸುಳಿಗಾಳಿ ಹಾಗೂ ನಿಸರ್ಗ ವೈಭವದ ಆನಂದವನ್ನು ವಿದ್ಯಾರ್ಥಿಗಳು ಮನಸಾರೆ ಆಸ್ವಾದಿಸಿದರು. ಹೊನ್ನಾವರದ ಶರಾವತಿ ನದಿಯ ಹಿನ್ನೀರಿನ ಪ್ರದೇಶದಲ್ಲಿರುವ ದಟ್ಟ ಮ್ಯಾಂಗ್ರೋವ್ ಕಾಡಿನ ಮಧ್ಯೆ ನಿರ್ಮಿಸಲಾಗಿರುವ ಮರದ ನಡಿಗೆಯ ಮಾರ್ಗ (ಬೋರ್ಡ್ವಾಕ್) ವಿದ್ಯಾರ್ಥಿಗಳಿಗೆ ಉಲ್ಲಾಸಕರ ಅನುಭವ ನೀಡಿತು.



ಕೋಟಾ ಶಿವರಾಮ ಕಾರಂತರ ನಿವಾಸದ ಮುಂದೆ ವಿವಿ ಕನ್ನಡ ವಿಭಾಗದ ಪ್ರವಾಸಿ ತಂಡ

ಯಾಣದ ಅರಣ್ಯ ಪಥದಲ್ಲಿ ಕೈಗೊಂಡ ಚಾರಣ ಈ ಪ್ರವಾಸದ ಅತ್ಯಂತ ರೋಚಕ ಘಟ್ಟವಾಗಿತ್ತು. ದಟ್ಟ ಅರಣ್ಯದ ನಡುವೆ ಸಾಗುತ್ತಾ ಪ್ರಕೃತಿಯ ನಿಶ್ಯಬ್ದತೆ, ಎತ್ತರವಾಗಿ ತಲೆ ಎತ್ತಿನಿಂತಿರುವ ವಿಶಿಷ್ಟ ಶಿಲಾರಚನೆಗಳು ಹಾಗೂ ಪಶ್ಚಿಮ ಘಟ್ಟದ ಹಸಿರು ಸಿರಿ ವಿದ್ಯಾರ್ಥಿಗಳಿಗೆ ಅವಿಸ್ಮರಣೀಯ ಅನುಭವವಾಗಿ ಪರಿಣಮಿಸಿತು.

ಶೈಕ್ಷಣಿಕ ಪ್ರವಾಸದಲ್ಲಿ ಉಪನ್ಯಾಸಕರಾದ ಡಾ. ಗೋಪಿ ಎಸ್.ಎಂ, ಡಾ.ಮಂಜು.ಸಿ.ಎನ್, ಡಾ.ಕುಮಾರ್.ಬಿ, ಡಾ.ಅಖ್ತರ್. ಎಸ್, ಡಾ.ಚಂದ್ರಾವತಿ. ಎಸ್, ಡಾ.ಗಂಗಪ್ಪ.ಎ, ಡಾ.ಪ್ರಿಯಾಂಕ ಎಸ್.ಎನ್ ಹಾಗೂ 28 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಯೋಗ ದಿನಾಚರಣೆಯಲ್ಲಿ ವಿವಿ ವಿದ್ಯಾರ್ಥಿಗಳು, ಸಿಬ್ಬಂದಿಗೆ ಡಾ.ಉಪೇಂದ್ರರಿಂದ ತರಬೇತಿ

ಜೂನ್ 21 ರಂದು 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಸಮಾರಂಭದಲ್ಲಿ ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ ಬಿ. ಕುಡೇನಟ್ಟಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜ್ಯೋತಿ ವೆಂಕಟೇಶ್, ಪ್ರೊ. ಮೇಧಾ ಇಟಗಿ ಹುಯಿಲಗೋಳ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## Dr. MSBCU Inter Departmental Cultural Fest. Results

| Events | Name of the Student | Department | Place |
|---|---|---|---|
| Elocution | Moksha N Gowda | Zoology | Winner |
| | Mohan B | Mass Communications | Runner |
| Debate | S Varun & Mohan Gowda V | Mass Communications | Winner |
| | Abhishek K & Navya H M | Sociology | Runner |
| General Quiz | Sudeep C R & Divya Dharshini | History | Winner |
| | Jayaram S & Hanumesh | Economics | Runner |
| Painting | Priyanshu Kumari | Fashion and Apparel Design | Winner |
| | Sagar K V | M Com (FB) | Runner |
| Clay Modelling | Sagar K V | M Com (FB) | Winner |
| | Dharshan Gowda | Botany | Runner |
| Collage | Manoj Gowda | M B A | Winner |
| | Dicky Lamu Tamang | Sociology | Runner |
| Poster Making | Gokul Krishna K | M Com (Fintech) | Winner |
| | Jeevan N | Computer Science(BCA) | Runner |
| Rangoli | Chithra T P | Chemistry | Winner |
| | Dharshan Gowda | Botany | Runner |
| Cartoon | Manoj Kumar | BCA | Winner |
| | Yashwanth H K | M B A | Runner |
| Mime | Kiran and Team | M Com (FB) | Winner |
| | Abhishek and Team | Sociology | Runner |
| Skit | Allabakar and Team | B Com (FA) | Winner |
| | Jayanth and Team | M Com (FT) | Runner |
| Classical singing Solo | Swapna M N | Mathematics | Winner |
| | Sowmya M | Kannada | Runner |
| Western singing Solo | Raksha R Kumar | Zoology | Winner |
| | Naveen Kumar | Zoology | Runner |
| Western Instrument | Praveka S Achar | Zoology | Winner |
| | Kiran | M Com (A&T) | Runner |
| Light Music singing Solo | Praveka S Achar | Zoology | Winner |
| | Shalini | M Com (A&T) | Runner |
| Filmy singing Solo | Ngangon Loyangamba Meetei | English | Winner |
| | Yogesh Gowda | Chemistry | Runner |
| Group Singing (Indian) | Harish & Team | M Com (FT) | Winner |
| | Rakshitha M P & Team | Economics | Runner |
| Freestyle Dance Solo | Raksha R Kumar | Zoology | Winner |
| | Yashaswini S | M Com (A&T) | Runner |
| Classical Dance Solo | Bhoomika D R | M Com (F&B) | Winner |
| | Yashaswini S | M Com (A&T) | Runner |
| Folk Dance Group | Praveka S Achar & Team | Zoology | Winner |
| | Pavan and Team | Economics | Runner |
| Freestyle/Fusion Dance Group | Chandana R and Team | M B A | Winner |
| | Raksha R Kumar & Team | Zoology | Runner |
| Fashion Show | Deekshitha Raj and Team | Computer Science | Winner |
| | Moksha N Gowda and Team | Zoology | Runner |

## Dr. MSBCU Inter Departmental PG Sports Results

| Event | Name of the Student | Department | Place |
|---|---|---|---|
| 100 Meters Men | Anil | Political Science | Gold |
| | Chethan H M | M.Com | Silver |
| | Sudeep | Political Science | Bronze |
| 100 Meters Women | Suchithra M | Computer Science | Gold |
| | Savitha A | MBA | Silver |
| | Nischitha A P | Mathematics | Bronze |
| | Nagamma L | Kannada | Bronze |
| 200 Meters Men | Deepak D | MBA | Gold |
| | Abhishek K | Sociology | Silver |
| | Thanush | Computer Science | Bronze |
| 200 Meters Women | Savitha A | MBA | Gold |
| | Sumana S | Zoology | Silver |
| | Pragathi | MBA | Bronze |
| 400 Meters Men | Bhaskar Reddy | English | Gold |
| | M N Naveen Kumar | Mathematics | Silver |
| | Yeshwanth H K | MBA | Bronze |
| 400 Meters Women | Sumana S | Zoology | Gold |
| | Anusha S | Sociology | Silver |
| | Shree Pradha Girvani | Chemistry | Bronze |
| Shotput Throw Men | Preetham P | Computer Science | Gold |
| | Manoj M | Chemistry | Silver |
| | Radha Krishna N | Chemistry | Bronze |
| Shotput Throw Women | Megha D | M.Com | Gold |
| | Sowmya V | Sociology | Silver |
| | Shilpa J | Kannada | Bronze |
| Relay 4x100 Meters Men Team | Praneeth & Team | Computer Science | Gold |
| | Ajay & Team | MBA | Silver |
| | Anil & Team | Political Science | Bronze |
| Relay 4x100 Meters Women Team | Ankitha & Team | M.Com | Gold |
| | Lakshmi & Team | Sociology | Silver |
| | Savitha A & Team | MBA | Bronze |
| Badminton Men Team Winners | Preetham & Pranith | Computer Science | Gold |
| Badminton Men Team Runners Up | Darshith H & Baskar | English | Silver |
| Badminton Women Team Winners | Akshatha N M & Deepa S | M.Com | Gold |
| Badminton Women Team | Likitha & Shraddha | MBA | Silver |
| Runners Up | | | |
| Table Tennis Men Team Winners | Dharashan M V & Deepak D | MBA | Gold |
| Table Tennis Men Team Runners Up | Aftab Ahmed & Abhishek G S | Physics | Silver |
| Table Tennis Women Team Winners | Sumana S & Trupti S | Zoology | Gold |
| Table Tennis Women Team Runners Up | Vidhaya Shree C N & Nayana V | Computer Science | Silver |
| Tug of War Men Team | Department of Computer Science | | Winners |
| | Department of Political Science | | Runners Up |
| Tug of War Women Team | Department of Zoology- | | Winners |
| | Department of MBA- | | Runners Up |
| Box Cricket Men Team | Department of Computer Science- | | Winners |
| | Department of M.Com | | Runners Up |
| Box Cricket Women Team | Department of M.Com | | Winners |
| | Department of MBA | | Runners Up |
| Kabaddi Men Team | Department of MSW | | Winners |
| | Department of M.Com | | Runners Up |
| Kabaddi Women Team | Department of Computer Science | | Winners |
| | Department of M. Com | | Runners Up |
| Volleyball Men Team | Department of MA Arts | | Winners |
| | Department of Computer Science | | Runners Up |
| Throw Ball Women Team | Department of Computer Science | | Winners |
| | Department of M. Com | | Runners Up |


**ಸಂಪಾದಕೀಯ ಮಂಡಳಿ**

ಡಾ. ಟಿ. ಎನ್. ತಾಂಡವ ಗೌಡ
ಸಂವಹನ ವಿಭಾಗ ಮುಖ್ಯಸ್ಥರು.
ಎಸ್. ಆರ್. ಆರಾಧ್ಯ
ಮಾಧ್ಯಮ ಸಮಾಲೋಚಕರು.
ಡಾ. ಪ್ರವೀಣ ಡಿ.ಎಸ್.
ಡಾ. ಮರಿಸ್ವಾಮಿ.
ಡಾ. ತೇಜಸ್ವಿನಿ ದೇವಕುಮಾರ್.
ಡಾ. ನಂದೀಶ ಎನ್.
ಡಾ. ಶ್ರೀನಿವಾಸ್ ಸಿ.ಎನ್.
ಸರ್ವಜಿತ್ ಕುಮಾರ್ ಜೆ.ಎನ್.
(ಪುಟ ವಿನ್ಯಾಸಕರು)
ಪುನೀತ್ ಡಿ.
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

ಪ್ರೊ. ರಮೇಶ್. ಬಿ
ಮಾನ್ಯ ಕುಲಪತಿಗಳು.
ನವೀನ್ ಜೋಸೆಫ್. ಎ
ಮಾನ್ಯ ಕುಲಸಚಿವರು.
ಪ್ರೊ.ರಮೇಶ.ಬಿ. ಕುಡೇನಟ್ಟಿ
ಕುಲಸಚಿವರು–ಮೌಲ್ಯಮಾಪನ.
ಎಂ.ವಿ. ವಿಜಯಲಕ್ಷ್ಮಿ
ಮಾನ್ಯ ವಿತ್ತಾಧಿಕಾರಿಗಳು.
ಪ್ರೊ. ಕೆ.ಆರ್.ಜಲಜಾ
ಡೀನರು, ವಾಣಿಜ್ಯ ನಿಕಾಯ.
ಪ್ರೊ. ಜ್ಯೋತಿ ವೆಂಕಟೇಶ್
ಡೀನರು, ಕಲಾ ನಿಕಾಯ.
ಪ್ರೊ. ಪಿ. ಆರ್. ಚೇತನ
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

ಅರ್ಥ್, ಎಂಸಿಜೆ, ದ್ವಿತೀಯ
ಎ. ಪಿ. ಶರ್ಮಾ, ಎಂಸಿಜೆ, ಪ್ರಥಮ
ರಂಜಿತ್ ಕುಮಾರ್, ಎಂಸಿಜೆ,


**ತಿಂಗಳ ಬುತ್ತಿ**

**July 8-9:** International Conference on Human-Centric Commerce in the Age of Intelligent Automation

**July 17-18:** International Conference on AI-Driven Management & Sustainable Business Transformation.

Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001